# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂ: ಅ.ಅ.(ಪ)/ಪಿಆರ್/ 285 /09-10.

ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಕಛೇರಿ,
ಭಾಷ್ಯಂ ಪಾರ್ಕ್, ಸೌತ್ ಸೆಂಟ್ರಲ್ ಸ್ಟ್ರೀಟ್,
ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20
ದಿನಾಂಕ: 29-12-2009.

## ಕಾರ್ಯಾದೇಶ

ವಿಷಯ : ಸ.ಕಾ.ಅ.(ಚಾಮರಾಜಪೇಟೆ ಉಪ ವಿಭಾಗ) ವಾರ್ಡ್ ಸಂಖ್ಯೆ 30/ ಡಿ(ಹೊಸದು-139) ರಲ್ಲಿ ಬೆಳಗಿನ ಪಾಳಿಯಲ್ಲಿ ಪೌರಕಾರ್ಮಿಕರ ಹುದ್ದೆ ಖಾಲಿ ಇರುವುದರಿಂದ ಗುತ್ತಿಗೆ ಆಧಾರದ ಮೇಲೆ ಪೌರಕಾರ್ಮಿಕರನ್ನು ನಿಯೋಜಿಸಿಕೊಂಡು ಪ್ರದೇಶದಲ್ಲಿ ಸ್ವಚ್ಛತೆಗೊಳಿಸುವ ಕುರಿತು.

ಉಲ್ಲೇಖ: 1. ಸ.ಕಾ.ಅ (ಚಾಮರಾಜಪೇಟೆ) ರವರ ವರದಿ ದಿನಾಂಕ 04-12-2009.

ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು(ಚಾಮರಾಜಪೇಟೆ) ಪಶ್ಚಿಮ ವಲಯದ ವಾರ್ಡ್ ಸಂಖ್ಯೆ : 30/ಡಿ ನಲ್ಲಿ, ಬೆಳಗ್ಗಿನ ಪಾಳಿಯಲ್ಲಿ ಪೌರಕಾರ್ಮಿಕರ ಹುದ್ದೆಗಳ ಖಾಲಿ ಇರುವುದರಿಂದ ಗುತ್ತಿಗೆ ಆಧಾರದ ಮೇಲೆ 20 ಜನ ಪೌರಕಾರ್ಮಿಕರನ್ನು ನಿಯೋಜಿಸಿಕೊಂಡು ಪ್ರದೇಶದಲ್ಲಿ ಸ್ವಚ್ಛತೆಗೊಳಿಸಲು ತಾತ್ಕಾಲಿಕವಾಗಿ ಜಂಟಿ ಆಯುಕ್ತರ ಆದೇಶದಂತೆ ಮುಂದಿನ ಈ ಆದೇಶವನ್ನು ಹೊರಡಿಸಲಾಗಿದೆ.

ನಿಗಧಿಪಡಿಸಿರುವ ಒಂದು ತಿಂಗಳ ಮೊತ್ತ ರೂ. 96,588.00 (ರೂ. ತೊಂಭತ್ತಾರು ಸಾವಿರದ ಐದುನೂರ ಎಂಭತ್ತೆಂಟು ಮಾತ್ರ). ಈ ಕೆಲಸದ ಆದೇಶವು ದಿನಾಂಕ 05-12-2009 ರಿಂದ ತಾತ್ಕಾಲಿಕವಾಗಿ ಜಾರಿಯಲ್ಲಿದ್ದು ಮುಂದಿನ ಆದೇಶದವರೆಗೆ ಅಥವಾ ಟೆಂಡರ್ ಕರೆಯುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ತಾತ್ಕಾಲಿಕವಾಗಿ ಅಸ್ತಿತ್ವದಲ್ಲಿದ್ದು ಈ ಕೆಳಕಂಡ ಷರತ್ತುಗಳಿಗೊಳಪಡಿಸಿದೆ.

## ಷರತ್ತುಗಳು ಮತ್ತು ನಿಬಂಧನೆಗಳು

1. ಗುತ್ತಿಗೆದಾರನು ಕೆಲಸಕ್ಕಾಗಿ ನೇಮಕ ಮಾಡಿಕೊಳ್ಳಲು ವ್ಯಕ್ತಿಗಳಿಗೆ ಆಗಿರಬೇಕಾದ ಕನಿಷ್ಟ ವಯಸ್ಸು 18 ವರ್ಷ ತುಂಬಿರಬೇಕು ಹಾಗೂ 55 ವರ್ಷ ಮೀರಿರಬಾರದು ಹಾಗೂ ಆರೋಗ್ಯ ಮತ್ತು ಸಧೃಡ ಕಾರ್ಮಿಕರನ್ನು ಮಾತ್ರ ನೇಮಿಸತಕ್ಕದ್ದು. 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು.
2. ಕಾರ್ಮಿಕರಿಗೆ ಅನ್ವಯವಾಗುವ ನಿಯಮಗಳಂತೆ ಸಂಬಳ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸುವುದು.
3. ಕೆಲಸದ ಸಮಯ ಬೆಳಿಗ್ಗೆ 6.30ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಕಾರ್ಯ ನಿರ್ವಹಿಸುವುದು.

ಕಾರ್ಮಿಕರ ಗೈರು ಹಾಜರಿ ಹಾಗೂ ಕೆಲಸದ ಆದೇಶದಲ್ಲಿ ನಮೂದಿಸಿದ ಸಂಖ್ಯೆಗಿಂತ ಕಡಿಮೆ ಕಾರ್ಮಿಕರನ್ನು ಒದಗಿಸಿದಲ್ಲಿ ದೈನಂದಿನ ಸಂಭಾವನೆಗೆ ಅನುಗುಣವಾಗಿ ಎಷ್ಟು ಕಾರ್ಮಿಕರು ಗೈರುಹಾಜರಿ ಆಗುವರೋ ಅಷ್ಟು ದಿನಗಳ ಮೊತ್ತದ ಒಂದೂವರೆಯಷ್ಟು ಮೊತ್ತವನ್ನು ಸದರಿ ಮಾಹೆಯ ಬಿಲ್ಲಿನಲ್ಲಿ ಕಟಾವು ಮಾಡಲಾಗುವುದು.

4. ಕೆಲಸಗಾರರಿಗೆ ನೇರಳೆ ಬಣ್ಣದ ಮೇಲು ಹೊದಿಕೆ(ಏಪ್ರಾನ್) ಹಾಗೂ ಅಗತ್ಯ ಸಲಕರಣೆಗಳನ್ನು ಒದಗಿಸತಕ್ಕದ್ದು.
5. ಸಾರ್ವಜನಿಕರಿಂದ ಸ್ವಚ್ಛತೆ ಬಗ್ಗೆ ಯಾವುದೇ ದೂರು ಬಾರದಂತೆ ನೋಡಿಕೊಳ್ಳತಕ್ಕದ್ದು.
6. ಪಾಲಿಕೆಯ ಪೌರ ಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳತಕ್ಕದ್ದಲ್ಲ.
7. ಕೆಲಸದ ಅವಧಿ ಮತ್ತು ಕೆಲಸ ನಿರ್ವಹಿಸುವ ಪೂರ್ವ ಜವಾಬ್ದಾರಿಯು ಗುತ್ತಿಗೆದಾರರದ್ದೇ ಆಗಿರುತ್ತದೆ.
8. ಕೆಲಸ ನಿರ್ವಹಿಸುವ ಪ್ರದೇಶದ ವಿವರಗಳನ್ನು ಸಂಬಂಧಪಟ್ಟ ಸ.ಕಾ.ಅ. ರವರಿಂದ ಪಡೆಯುವುದು ಮತ್ತು ಕೆಲಸವನ್ನು ಅವರ ನಿರ್ದೇಶನದಂತೆ ಹಾಗೂ ಮೇಲಾಧಿಕಾರಿಗಳ ಆದೇಶದಂತೆ ನಿರ್ವಹಿಸುವುದು.
9. ಈ ಕಾರ್ಯಾದೇಶವು ತಾತ್ಕಾಲಿಕವಾಗಿದ್ದು ಸಮರ್ಪಕವಾಗಿ ಕೆಲಸ ನಿರ್ವಹಿಸದಿದ್ದಲ್ಲಿ ಯಾವುದೇ ಮುನ್ಸೂಚನೆಯನ್ನು ನೀಡದೆ ಗುತ್ತಿಗೆಯನ್ನು ರದ್ದತಿ ಮಾಡಲಾಗುವುದು.

ಅಧೀಕ್ಷಕ ಅಭಿಯಂತರರು (ಪಶ್ಚಿಮ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ,

ಸಿ.ಓ.ಎನ್. ಜನಾರ್ಧನ
ನಂ.15, 4ನೇ ಅಡ್ಡರಸ್ತೆ,
4ನೇ ಮುಖ್ಯರಸ್ತೆ,
ಜಗಜೀವನರಾಮನಗರ,
ಬೆಂಗಳೂರು.

ಪ್ರತಿಯನ್ನು:

- ಜಂಟಿ ಆಯುಕ್ತರು(ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
- ಸಹಾಯಕ ಹಣಕಾಸು ನಿಯಂತ್ರಕರು(ಪಶ್ಚಿಮ) ರವರ ಮಾಹಿತಿಗಾಗಿ ರವಾನಿಸಿದೆ.
- ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಚಾಮರಾಜಪೇಟೆ) ರವರ ಮಾಹಿತಿಗಾಗಿ ರವಾನಿಸಿದೆ.
- ಗುತ್ತಿಗೆದಾರರಿಗೆ/ ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಕಾ.ಅ(ಚಾ.ಪೇ)ಪಿಆರ್/41/12-13

ಕಾರ್ಯಪಾಲಕ ಅಭಿಯಂತರವರ ಕಛೇರಿ
ಚಾಮರಾಜಪೇಟೆ ವಿಭಾಗ,
ಬಿ.ಬಿ.ಎಂ.ಪಿ.ವಾಣಿಜ್ಯ ಸಂಕೀರ್ಣ,
ಜೆ.ಸಿ. ರಸ್ತೆ, 2ನೇ ಮಹಡಿ,
ಬೆಂಗಳೂರು-02, ದಿನಾಂಕ:14-12-2012

## ಕಾರ್ಯಾದೇಶ

ವಿಷಯ:- ಚಾಮರಾಜಪೇಟೆ ಉಪ-ವಿಭಾಗ ವಾರ್ಡ್ ಸಂಖ್ಯೆ: **139**ರಲ್ಲಿಯ ಪ್ರದೇಶದಲ್ಲಿ ಬೆಳಗ್ಗಿನ ಪಾಳಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಫ್ಲೈಓವರ್ (ಮೇಲುಸೇತುವೆ)ನ್ನು ಶಿರ್ಸಿ ವೃತ್ತದಿಂದ ಟೌನ್‌ಹಾಲ್‌ಗೆ ಇಳಿಯುವವರೆಗೆ ಎರಡು ಕ್ಷಡೆ ರಸ್ತೆಯನ್ನು ಪ್ರತಿದಿನ ಶುಚಿಗೊಳಿಸಲು **12** ಜನ ಪೌರಕಾರ್ಮಿಕರನ್ನು ಹಾಗೂ ಒಬ್ಬರು ಸೂಪರ್‌ವೈಜರ್‌ರನ್ನು ನಿಯೋಜಿಸಿಕೊಂಡು ಸ್ವಚ್ಚತೆಗೊಳಿಸುವ ಕುರಿತು.

ಉಲ್ಲೇಖ:-
1. ಮಾನ್ಯ ಆಯುಕ್ತರವರ ಸುತ್ತೋಲೆ ಸಂಖ್ಯೆ:ಮುಲೆಅ/ಪಿಆರ್/11162/12-13, ದಿನಾಂಕ:27-11-2012
2. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಚಾಮರಾಜಪೇಟೆ ಉಪ-ವಿಭಾಗರವರ ವರದಿ ಆಧಾರದ ಮೇಲೆ ಅಪರ ಆಯುಕ್ತರು (ಪಶ್ಚಿಮ)ರವರ ಆದೇಶ ಸಂಖ್ಯೆ:7379/12-13, ದಿನಾಂಕ: 14-12-2012.

******

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪಶ್ಚಿಮ ವಲಯದ ಚಾಮರಾಜಪೇಟೆ ಉಪ-ವಿಭಾಗದ, ವಾರ್ಡ್ ಸಂಖ್ಯೆ: 139ರಲ್ಲಿ ಫ್ಲೈಓವರ್ (ಮೇಲುಸೇತುವೆ)ನ್ನು ಶಿರ್ಸಿ ವೃತ್ತದಿಂದ ಟೌನ್‌ಹಾಲ್‌ಗೆ ಇಳಿಯುವವರೆಗೆ ಎರಡು ಕ್ಷಡೆ ರಸ್ತೆಯನ್ನು ಪ್ರತಿದಿನ ಶುಚಿಗೊಳಿಸಲು 12 ಜನ ಪೌರಕಾರ್ಮಿಕರನ್ನು ಹಾಗೂ ಒಬ್ಬರು ಸೂಪರ್‌ವೈಜರ್‌ರನ್ನು ನಿಯೋಜಿಸಿಕೊಂಡು ಸ್ವಚ್ಚತೆಯನ್ನು ಸಮರ್ಪಕವಾಗಿ ಮಾಡಲು, ದಿನಾಂಕ: 15-12-2012 ರಿಂದ ಮುಂದಿನ ಆದೇಶದವರೆಗೆ ಅಥವಾ ಟೆಂಡರ್ ಕರೆಯುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ತಾತ್ಕಾಲಿಕವಾಗಿ ನಿರ್ವಹಿಸಲು ಆದೇಶಿಸಲಾಗಿದೆ.

ಲೋಕೋಪಯೋಗಿ ಇಲಾಖೆಯ ದರಪಟ್ಟಿಯನ್ವಯ ನಿಗಧಿಪಡಿಸಿರುವ ಒಂದು ತಿಂಗಳ ಮೊತ್ತ ರೂ.94957/- (ತೊಂಬತ್ತನಾಲ್ಕು ಸಾವಿರದ ಒಂಬೈನೂರ ಐವತ್ತೇಳು ರೂಪಾಯಿಗಳು ಮಾತ್ರ ಗಳಾರುತ್ತದೆ. ಈ ಕೆಲಸದ ಆದೇಶವು ದಿನಾಂಕ: 15-12-2012 ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತಿನೊಂದಿಗೆ ತಾತ್ಕಾಲಿಕವಾಗಿ ಮಾನ್ಯ ಆಯುಕ್ತರ ಆದೇಶದನ್ವಯ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ.

## ಷರತ್ತುಗಳು ಮತ್ತು ನಿಬಂಧನೆಗಳು

1. ಗುತ್ತಿಗೆದಾರರು ಕೆಲಸಕ್ಕಾಗಿ ನೇಮಕ ಮಾಡಿಕೊಳ್ಳುವ ವ್ಯಕ್ತಿಗಳಿಗೆ ಕನಿಷ್ಠ 18 ವರ್ಷ ವಯಸ್ಸು ತುಂಬಿರಬೇಕು ಹಾಗೂ 55 ವರ್ಷ ಮೀರಿರಬಾರದು ಹಾಗೂ ಆರೋಗ್ಯ ಮತ್ತು ಸದೃಢ ಕಾರ್ಮಿಕರನ್ನು ಮಾತ್ರ ನೇಮಿಸತಕ್ಕದ್ದು. 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು. ಒಟ್ಟು 12 ಜನ ಪೌರಕಾರ್ಮಿಕರನ್ನು ಹಾಗೂ ಒಬ್ಬರು ಸೂಪರ್‌ವೈಜರ್‌ರನ್ನು ನಿಯೋಜಿಸಿಕೊಂಡು ಕಾರ್ಯನಿರ್ವಹಿಸುವುದು.
2. ಕೆಲಸದ ಸಮಯದ ಬಗೆಗೆ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ/ಪರಿಸರ ಅಧಿಕಾರಿಗಳ ನಿರ್ದೇಶನದನ್ವಯ ಕಾರ್ಯನಿರ್ವಹಿಸುವುದು. ಬೆಳಗ್ಗೆ 6.00 ಘಂಟೆಯಿಂದ ಮಧ್ಯಾಹ್ನ 02.00 ಘಂಟೆಯ ವರೆಗೆ ಕೆಲಸ ಮಾಡಬೇಕಾಗಿರುತ್ತದೆ.
3. ಕಾರ್ಮಿಕರು ಗೈರು ಹಾಜರಿ ಹಾಗೂ ಕೆಲಸದ ಆದೇಶದಲ್ಲಿ ನಮೂದಿಸಿದ ಸಂಖ್ಯೆಗಿಂತ ಕಡಿಮೆ ಕಾರ್ಮಿಕರನ್ನು ಒದಗಿಸಿದಲ್ಲಿ ದೈನಂದಿನ ಸಂಭಾವನೆಗೆ ಅನುಗುಣವಾಗಿ ಎಷ್ಟು ಕಾರ್ಮಿಕರು ಗೈರುಹಾಜರಿ ಆಗುವರೋ ಅಷ್ಟು ದಿನಗಳ ಮೊತ್ತದ ಒಂದೂವರೆಯಷ್ಟು ಮೊತ್ತವನ್ನು ಸದರಿ ಮಾಹೆಯ ಬಿಲ್ಲಿನಲ್ಲಿ ಕಟಾವು ಮಾಡಲಾಗುವುದು.
4. ಕೆಲಸಗಾರರಿಗೆ ನೇರಳೆ ಬಣ್ಣದ ಮೇಲು ಹೊದಿಕೆ (ಏಪ್ರಾನ್) ಹಾಗೂ ಅಗತ್ಯ ಸಲಕರಣೆಗಳನ್ನು ಒದಗಿಸತಕ್ಕದ್ದು.

5. ಸಾರ್ವಜನಿಕರಿಂದ ಸ್ವಚ್ಛತೆ ಬಗ್ಗೆ ಯಾವುದೇ ದೂರುಗಳು ಬಾರದಂತೆ ನೋಡಿಕೊಳ್ಳತಕ್ಕದ್ದು.
6. ಪಾಲಿಕೆಯ ಪೌರಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳತಕ್ಕದ್ದಲ್ಲ.
7. ಕೆಲಸದ ಅವಧಿ ಮತ್ತು ಕೆಲಸ ನಿರ್ವಹಿಸುವ ಪೂರ್ಣ ಜವಾಬ್ದಾರಿಯು ಗುತ್ತಿಗೆದಾರರದ್ದೇ ಆಗಿರುತ್ತದೆ.
8. ಕೆಲಸ ನಿರ್ವಹಿಸುವ ಪ್ರದೇಶದ ವಿವರಗಳನ್ನು ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಪರಿಸರ ಅಧಿಕಾರಿಗಳು ಚಾಮರಾಜಪೇಟೆ ಉಪ-ವಿಭಾಗ ರವರಿಂದ ಪಡೆಯುವುದು ಮತ್ತು ಕೆಲಸವನ್ನು ಅವರ ನಿರ್ದೇಶನದಂತೆ ಹಾಗೂ ಮೇಲಾಧಿಕಾರಿಗಳ ಆದೇಶದಂತೆ ನಿರ್ವಹಿಸುವುದು.
9. ಕೆಲಸಗಾರರಿಗೆ ಕೈಗವಚಗಳು ಮತ್ತು ಇತರ ಸುರಕ್ಷತಾ ಸಾಮಾಗ್ರಿಗಳನ್ನು ಒದಗಿಸತಕ್ಕದ್ದು.
10. ಸಮರ್ಪಕವಾಗಿ ಕೆಲಸ ನಿರ್ವಹಿಸದೇ ಇದ್ದಲ್ಲಿ ಯಾವ ಮುನ್ಸೂಚನೆಯಿಲ್ಲದೆ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.
11. ಕನಿಷ್ಠ ಕಾಯ್ದೆಯಂತೆ ಪೌರಕಾರ್ಮಿಕರಿಗೆ ಮಾಸಿಕ ಮೊತ್ತ ಒಟ್ಟು ರೂ.7271/- ಗಳನ್ನು ಪಾವತಿಸತಕ್ಕದ್ದು.
12. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ನೌಕರರಿಗೆ ಕನಿಷ್ಠ ವೇತನ ಕಾಯ್ದೆಯಂತೆ ಚೆಕ್ ಮುಖಾಂತರ ವೇತನ ಪಾವತಿಸುವುದು ಹಾಗೂ ನೌಕರರ ಇಎಸ್ಐ+ಇಪಿಎಫ್ ಇತ್ಯಾದಿ ಯಾವುದೇ ಕಟಾವಣೆಗಳಿದ್ದಲ್ಲಿ ತಮ್ಮ ಹಣದಲ್ಲೇ ಸಂಬಂಧಪಟ್ಟ ಇಲಾಖೆಗೆ ಪಾವತಿಸುವುದು. ಈ ರೀತಿ ಪಾವತಿಸಿದ ಬಿಲ್ಲುಗಳನ್ನು ಮತ್ತು ದಾಖಲಾತಿಗಳನ್ನು ಈ ಕಛೇರಿಗೆ ಸಲ್ಲಿಸಿ ಒಟ್ಟು ಮೊತ್ತವನ್ನು ಬಿಬಿಎಂಪಿ ವತಿಯಿಂದ ಮರುಪಾವತಿ ಪಡೆಯುವುದು.

ಕಾರ್ಯಪಾಲಕ ಅಭಿಯಂತರರು
Executive Engineer
ಚಾಮರಾಜಪೇಟೆ ವಿಭಾಗ
Chamarajapete Division
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
Bruhath Bengaluru Mahanagara Palike

**ಮಾನ್ಯ ಅಪರ ಆಯುಕ್ತರು(ಪಶ್ಚಿಮ)ರವರ ಆದೇಶದಂತೆ)**

ಗೆ,

**ಶ್ರೀ.ಶ್ರೀನಿವಾಸ.ಸಿ**
**#39, ಎಸ್.ಜಿ.ಹಳ್ಳಿ, ಬಸವೇಶ್ವರನಗರ,**
**ಬೆಂಗಳೂರು-560 079**

ಪ್ರತಿಯನ್ನು:

- ಮಾನ್ಯ ಆಯುಕ್ತರ ಆಪ್ತಕಾರ್ಯದರ್ಶಿಗಳಿಗೆ ಕಳುಹಿಸ್ಮತ್ತಾ ಸದರಿ ವಿಷಯವನ್ನು ಮಾನ್ಯ ಆಯುಕ್ತರ ಗಮನಕ್ಕೆ ತರಲು ಕೋರಲಾಗಿದೆ.
- ಜಂಟಿ ಆಯುಕ್ತರು (ಪಶ್ಚಿಮ)ರವರ ಅವಗಾಹನೆಗೆ ಸಲ್ಲಿಸಿದೆ.
- ಸಹಾಯಕ ಹಣಕಾಸು ನಿಯಂತ್ರಕರು (ಪಶ್ಚಿಮ)ರವರ ಮಾಹಿತಿಗಾಗಿ ರವಾನಿಸಿದೆ.
- ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಚಾಮರಾಜಪೇಟೆ ಉಪ-ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.
- ಗುತ್ತಿಗೆದಾರರಿಗೆ/ಕಛೇರಿ ಕಡತಕ್ಕೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ ಕಾ.ಪಾ.ಅ(ಚಾಪೇ)/ಪಿ.ಆರ್/513/13-14

ಕಾರ್ಯಪಾಲಕ ಅಭಿಯಂತರರ ಕಛೇರಿ
ಚಾಮರಾಜಪೇಟೆ ವಿಭಾಗ, 2ನೇ ಮಹಡಿ
ಬಿಬಿಎಂಪಿ ವಾಣಿಜ್ಯ ಸಂಕೀರ್ಣ, ಡೆ.ಸಿ. ರಸ್ತೆ
ಬೆಂಗಳೂರು, ದಿನಾಂಕ: 22-11-2013

## ಸರಬರಾಜು ಆದೇಶ

ವಿಷಯ: ವಾರ್ಡ್ ಸಂಖ್ಯೆ: 139 ಎಸ್.ಕೆ.ಆರ್.ಮಾರುಕಟ್ಟೆ ಪ್ರದೇಶದಲ್ಲಿ (ವಾರ್ಡ್ ಹೊರತುಪಡಿಸಿ) ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ ಮತ್ತು ವಿಲೇವಾರಿಗಾಗಿ ಪೌರಕಾರ್ಮಿಕರನ್ನು ಹಾಗೂ ವಾಹನಗಳನ್ನು ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ:
1) ಮಾನ್ಯ ಆಯುಕ್ತರ ಆಪ್ತ ಕಾರ್ಯಾಲಯದ ಸಂಖ್ಯೆ:ಪಿಎಸ್ಆರ್(ಜ)/5617/13-14, ದಿ: 30/10/2013
2) ಮಾನ್ಯ ಆಯುಕ್ತರ ಆಪ್ತ ಕಾರ್ಯಾಲಯದ ಸಂಖ್ಯೆ:ಪಿಎಸ್ಆರ್(ಜ)/6206/13-14, ದಿ: 21/11/2013.
3) ಜಂಟಿ ಆಯುಕ್ತರು (ಘ.ತ್ಯಾನಿ)ರವರ ಟಪ್ಪಾಲ್ ಸ್ವೀಕೃತಿ ಸಂಖ್ಯೆ: 1179/13-14 ದಿ: 16-11-2013
4) ಜಂಟಿ ಆಯುಕ್ತರು (ಪಶ್ಚಿಮ)ರವರ ಟಪ್ಪಾಲ್ ಸ್ವೀಕೃತಿ ಸಂಖ್ಯೆ:5935/13-14 ದಿ: 18-11-13 & 22-11-13
5) ಮುಖ್ಯ ಅಭಿಯಂತರರು (ಪಶ್ಚಿಮ)ರವರ ಟಪ್ಪಾಲ್ ಸ್ವೀಕೃತಿ ಸಂಖ್ಯೆ:922/13-14 ದಿನಾಂಕ: 21-11-13
6) ಅಧೀಕ್ಷಕ ಅಭಿಯಂತರರು (ಪಶ್ಚಿಮ)ರವರ ಟಪ್ಪಾಲ್ ಸ್ವೀಕೃತಿ ಸಂಖ್ಯೆ:768/13-14 ದಿ:19-11-2013 ಹಾಗೂ 22-11-2013

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ:139ರ ಎಸ್.ಕೆ.ಆರ್.ಮಾರುಕಟ್ಟೆ ಪ್ರದೇಶದಲ್ಲಿ (ವಾರ್ಡ್ ಹೊರತುಪಡಿಸಿ) ಇಲಾಖಾ ಮಟಿಯಿಂದ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯನಿರ್ವಹಿಸಲು ಪೌರಕಾರ್ಮಿಕರನ್ನು ಮತ್ತು ವಾಹನಗಳನ್ನು ಸರಬರಾಜು ಮಾಡಲು ದಿನಾಂಕ: 02-11-2013 ರಂದು ಕರೆಯಲಾದ ಕೊಟೇಷನ್ ಪ್ರಕಟಣೆಯಲ್ಲಿ ಶ್ರೀ ರಾಮಾಂಜನೇಯ ಸ್ವಾಮಿ ಪ್ರಸನ್ನ ಸಂಸ್ಥೆಯು ನಮೂದಿಸಿರುವ ದರವನ್ನು ಉಳಿದ ಇನ್ನೆರಡು ಸಂಸ್ಥೆಗಳು ನಮೂದಿಸಿದ ದರಗಳಿಗಿಂತ ಕಡಿಮೆ ಇರುತ್ತದೆ ಹಾಗೂ ಪಾಲಿಕೆಯು ಸಿದ್ಧಪಡಿಸಿರುವ ಅಂದಾಜು ಪಟ್ಟಿಗೆ ಸಮವಾಗಿರುತ್ತದೆ ಸದರಿ ಮೊತ್ತವನ್ನು ಮಾಸಿಕ ರೂ.43,50,000/- (ನಲ್ವತ್ಮೂರು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)ಗಳಿಗೆ ಸರಬರಾಜು ಮಾಡಲು ಒಪ್ಪಿರುತ್ತಾರೆ. ಸದರಿ ದರಗಳು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗಿರುತ್ತದೆ. ಅದರಂತೆ ಈ ಸರಬರಾಜು ಆದೇಶವು ದಿನಾಂಕ: 11-11-2013 ರಿಂದ ಪೂರ್ವಾನ್ವಯದಿಂದ ಜಾರಿಗೆ ಬರುವಂತೆ ಆದೇಶಿಸಿದೆ. ಈ ಕೆಳಕಂಡ ವಸ್ತುಗಳನ್ನಯ ಅಂದಾಜು ಪಟ್ಟಿಯಂತೆ ಸರಬರಾಜುಗೊಳಿಸಲು ಆದೇಶಿಸಿದೆ. ಈ ಸರಬರಾಜು ಆದೇಶವು ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

**ಆದೇಶದಂತೆ ಎಸ್.ಕೆ.ಆರ್.ಮಾರುಕಟ್ಟೆ ಪ್ರದೇಶದಲ್ಲಿ (ವಾರ್ಡ್ ಹೊರತುಪಡಿಸಿ) ಮೂರು ಪಾಳಿಗಳಲ್ಲಿ ಸ್ವಚ್ಛತಾ ಕೆಲಸ ಹಾಗೂ ಘನತ್ಯಾಜ್ಯ ಸಾಗಾಣಿಕೆ ಕೆಲಸಕ್ಕೆ ಸರಬರಾಜು ಮಾಡಬೇಕಿರುವ ವಿವರಗಳು ಈ ಕೆಳಕಂಡಂತಿದೆ:**

| | |
|---|---|
| 1) ಪೌರಕಾರ್ಮಿಕರು ಮತ್ತು ತಳ್ಳುವ ಗಾಡಿ | 180 ಸಂಖ್ಯೆಗಳು |
| 2) ಕಾಂಪ್ಯಾಕ್ಟರ್ ವಾಹನದೊಂದಿಗೆ ಚಾಲಕ ಸಮೇತ ಒಬ್ಬರು ಸಹಾಯಕ | 8 ಸಂಖ್ಯೆಗಳು |
| 3) ಟಿಪ್ಪರ್ ಲಾರಿಯೊಂದಿಗೆ ಚಾಲಕ ಸಮೇತ ನಾಲ್ಕು ಸಹಾಯಕರು | 3 ಸಂಖ್ಯೆಗಳು |
| 4) ಆಟೊ ಟಿಪ್ಪರ್‌ನೊಂದಿಗೆ ಚಾಲಕ ಸಮೇತ ಒಬ್ಬರು ಸಹಾಯಕ | 12 ಸಂಖ್ಯೆಗಳು |
| 5). ಜೆಸಿಬಿ ವಾಹನ | 3 ಸಂಖ್ಯೆಗಳು |
| 6) ಮೇಸ್ತ್ರಿಜಾರಕ | 9 ಸಂಖ್ಯೆಗಳು |
| 7) ಹೆಬ್ಬುವಂ ತಳ್ಳುವ ಗಾಡಿಗಳು ಮತ್ತು ಒಬ್ಬರು ಸಹಾಯಕ | 30 ಸಂಖ್ಯೆಗಳು |
| 8) ಫೆನಾಯಿಲ್ | 200 ಲೀಟರ್/ಮಾಹೆಗೆ |
| 9) ಬ್ಲೀಚಿಂಗ್ ಪೌಡರ್ | 849.12ಕೆ.ಜಿ./ಮಾಹೆಗೆ |

## ಷರತ್ತುಗಳು

1. ಮುಂದಿನ ತಿಂಗಳು ಬಿಲ್ಲುಗಳನ್ನು ಸಲ್ಲಿಸುವಾಗ ಕಾರ್ಮಿಕರ ಪರವಾನಗಿ ಮತ್ತು ಇ.ಎಸ್.ಐ., ಪಿ.ಎಫ್ ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸುವುದು.
2. ಕಾರ್ಮಿಕರಿಗೆ ಕಡ್ಡಾಯವಾಗಿ ಕಾರ್ಮಿಕರ ಮತ್ತು ಗುತ್ತಿಗೆದಾರರ ವಂತಿಕೆ ಇ.ಎಸ್.ಐ., ಪಿ.ಎಫ್‌ಗಳನ್ನು ಪಾವತಿಸುವುದು ಹಾಗೂ ಅವರ ಪ್ರತಿಯನ್ನು ಮಾಸಿಕ ಬಿಲ್ಲಿನೊಂದಿಗೆ ಸಲ್ಲಿಸುವುದು.
3. ನೀವು ಸರಬರಾಜು ಮಾಡಿರುವ ಪೌರಕಾರ್ಮಿಕರನ್ನು ಯಾವುದೇ ಕಾರಣಕ್ಕೂ ಬಿ.ಬಿ.ಎಂ.ಪಿ ನೌಕರರೆಂದು ಪರಿಗಣಿಸತಕ್ಕದ್ದಲ್ಲ.
4. ನೀವು ಸರಬರಾಜು ಮಾಡುವ ವಾಹನಗಳು ಉತ್ತಮ ಸ್ಥಿತಿಯಲ್ಲಿರಬೇಕು ಹಾಗೂ ವಾಹನಗಳ ರಿಪೇರಿ ನಿಮ್ಮದೇ ಜವಾಬ್ದಾರಿ.
5. ಕೆಲಸಗಾರರಿಗೆ ನೇರಳೆ/ಹಸಿರು ಬಣ್ಣದ ಮೇಲು ಹೊದಿಕೆ (ಏಪ್ರಾನ್) ಹಾಗೂ ಅಗತ್ಯ ಸಲಕರಣೆಗಳನ್ನು ಒದಗಿಸತಕ್ಕದ್ದು.
6. ಕೆಲಸ ಸಮಯ ಬಗೆಗೆ ಪರಿಸರ ಅಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಚಾಮರಾಜಪೇಟೆ) ಉಪವಿಭಾಗ ರವರ ನಿರ್ದೇಶನದನ್ವಯ ಕಾರ್ಯನಿರ್ವಹಿಸುವುದು.
7. ಸ್ವಚ್ಛತಾ ಕೆಲಸಕ್ಕೆ ಪೌರಕಾರ್ಮಿಕರು ಮತ್ತು ವಾಹನಗಳು ಗೈರುಹಾಜರಾದಲ್ಲಿ ಮಾಸಿಕ ಮೊತ್ತದ ಬಿಲ್ಲಿನಲ್ಲಿ ಕಟಾವು ಮಾಡಲಾಗುವುದು.
8. ಪ್ರತಿನಿತ್ಯ ಈ ವಾರ್ಡ್‌ನಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯ ವಸ್ತುಗಳನ್ನು ಹಸಿ ಕಸ, ಒಣ ಕಸ ಮತ್ತು ನೈರ್ಮಲ್ಯ ಕಸ ಇತ್ಯಾದಿಯಾಗಿ ಪ್ರತ್ಯೇಕವಾಗಿ ಸಂಗ್ರಹಿಸಿ ಪ್ರತ್ಯೇಕವಾಗಿ ಪಾಲಿಕೆಯ ನಿರ್ದೇಶನದಂತೆ ವಿಲೇವಾರಿ ಮಾಡುವುದು.
9. ಒಣತ್ಯಾಜ್ಯವನ್ನು ಒಣತ್ಯಾಜ್ಯ ಸಂಗ್ರಹಣಾ ಘಟಕಕ್ಕೆ ಸಾಗಿಸುವುದು ಹಾಗೂ ಹಸಿ ಕಸವನ್ನು ಕೆ.ಸಿ.ಡಿ.ಸಿ.ಗೆ ಸಾಗಿಸುವುದು ಅನುಪಯುಕ್ತ ತ್ಯಾಜ್ಯಗಳನ್ನು ಇತರೆ ತ್ಯಾಜ್ಯ ಸಂಗ್ರಹಣಾ ಘಟಕಗಳಿಗೆ ಸಾಗಿಸುವುದು.

ಕಾರ್ಯಪಾಲಕ ಅಭಿಯಂತರರು
ಘನತ್ಯಾಜ್ಯ ನಿರ್ವಹಣೆ
ಚಾಮರಾಜಪೇಟೆ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

ಗೆ,

ಶ್ರೀ ರಾಮಾಂಜನೇಯ ಸ್ವಾಮಿ ಪ್ರಸನ್ನ
# 06, 1ನೇ ಬಿ ಅಡ್ಡರಸ್ತೆ,
ಸಂಧ್ಯಾ ಟೆಂಟ್ ಹಿಂಭಾಗ,
ಹಳೇ ಮಡಿವಾಳ,
ಬೆಂಗಳೂರು-560068.

ಪ್ರತಿಯನ್ನು:

1. ಮಾನ್ಯ ಆಯುಕ್ತರವರ ಆಪ್ತ ಕಾರ್ಯದರ್ಶಿಗಳಿಗೆ ಸದರಿ ವಿಷಯವನ್ನು ಮಾನ್ಯ ಆಯುಕ್ತರವರ ಗಮನಕ್ಕೆ ತರಲು ಕೋರಿ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು(ಪಶ್ಚಿಮ ವಲಯ), ರವರ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು(ಪಶ್ಚಿಮ ವಲಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಸಹಾಯಕ ನಿಯಂತ್ರಕರು (ಹಣಕಾಸು) ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ಪರಿಸರ ಅಧಿಕಾರಿ (ಚಾಮರಾಜಪೇಟೆ) ಉಪವಿಭಾಗ ರವರಿಗೆ ಕಳುಹಿಸಿದೆ.
6. ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
7. ಕಛೇರಿ ಕಡತಕ್ಕೆ

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಕಾ.ಪಾ.ಅ(ಚಾಪೇ)Wo/PR/ 41 /13-14

ಕಾರ್ಯಪಾಲಕ ಅಭಿಯಂತರರ ಕಛೇರಿ
ಚಾಮರಾಜಪೇಟೆ ವಿಭಾಗ, 2ನೇ ಮಹಡಿ
ಬಿ.ಬಿ.ಎಂ.ಪಿ ವಾಣಿಜ್ಯ ಸಂಕೀರ್ಣ,ಜೆ.ಸಿ.ರಸ್ತೆ,
ಬೆಂಗಳೂರು, ದಿನಾಂಕ: 31/12/2013
ದೂರವಾಣಿ:22115996

## "ಸರಬರಾಜು ಆದೇಶ"

ವಿಷಯ: ವಾರ್ಡ್ ಸಂಖ್ಯೆ:139(ಎಸ್.ಕೆ.ಆರ್ ಮಾರುಕಟ್ಟೆಯನ್ನು ಹೊರತು ಪಡಿಸಿ) ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ ಮತ್ತು ವಿಲೇವಾರಿಗಾಗಿ ಪೌರಕಾರ್ಮಿಕರನ್ನು ಹಾಗೂ ವಾಹನಗಳನ್ನು ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ: 1.ಜಂಟಿ ಆಯುಕ್ತರು (ಪಶ್ಚಿಮ)ರವರ ಕಛೇರಿಯ ಆದೇಶದ ಸಂಖ್ಯೆ:6970/ಎ, ದಿನಾಂಕ:26-12-201

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ:139 (ಎಸ್.ಕೆ.ಆರ್ ಮಾರುಕಟ್ಟೆಯನ್ನು ಹೊರತು ಪಡಿಸಿ)ರಲ್ಲಿ ಇಲಾಖಾ ವತಿಯಿಂದ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ ಮತ್ತು ವಿಲೇವಾರಿ ಕಾರ್ಯನಿರ್ವಹಿಸಲು ಪೌರಕಾರ್ಮಿಕರನ್ನು ಮತ್ತು ವಾಹನಗಳನ್ನು ಸರಬರಾಜು ಮಾಡಲು ದಿನಾಂಕ:26-12-2013ರಂದು ಕರೆಯಲಾದ ಕೋಟೇಷನ್ ಪ್ರಕಟಣೆಯಲ್ಲಿ **ಶ್ರೀ.ಎನ್.ಗೌತಮ್ ರಾಜ್** ರವರು ನಮೂದಿಸಿರುವ ದರಗಳು ಪ್ರತಿ ಮಾಹೆಗೆ ರೂ.12,22,124/- (ರೂ.ಹನ್ನೆರಡು ಲಕ್ಷದ ಇಪ್ಪತ್ತೆರಡು ಸಾವಿರದ ಒಂದು ನೂರ ಇಪ್ಪತ್ತನಾಲ್ಕು ಗಳು ಮಾತ್ರ)ಗಳು ಉಳಿದ ದರಗಳಿಗಿಂತ ಕಡಿಮೆ ಇದ್ದು ಹಾಗೂ ಪಾಲಿಕೆಯು ಸಿದ್ದಪಡಿಸಿರುವ ಅಂದಾಜು ಪಟ್ಟಿಗಿಂದ ಕಡಿಮೆಯಾಗಿರುತ್ತದೆ. ಆದ್ದರಿಂದ ದಿನಾಂಕ:17-01-2014ರಿಂದ ಮುಂದಿನ ಆದೇಶದವರೆಗೆ ಕೆಳಕಂಡ ಷರತ್ತುಗಳನ್ವಯ ಈ ಕೆಳಕಂಡಂತೆ ಅಗತ್ಯವಿರುವ ಪೌರಕಾರ್ಮಿಕರು ಮತ್ತು ವಾಹನಗಳನ್ನು ಕೂಡಲೇ ಸರಬರಾಜುಗೊಳಿಸಲು ತಿಳಿಸಿದೆ.

| Sl. No | Particulars | Quantity | Unit Rate In Rs | Quoted rate / unit in Rs |
|---|---|---|---|---|
| 1. | Pourakarmikas with Push carts and other street | 60 | 9592.00 | 575520.00 |
| 2. | Auto Tipper with Driver and Helper | 7 | 28511.00 | 199577.00 |
| 3. | Tipper Lorry with Driver & 4 Helper | 3 | 93476.00 | 280428.00 |
| 4. | Compactor with One Driver and helper | 1 | 121944.00 | 121944.00 |
| 5. | Supervisors | 3 | 9885.00 | 29655.00 |
| 6. | Other Expenditure<br>Phenyle -<br>Bleaching Powder - | 62.50 Ltr<br>238 Kg | 80.05/ltr<br>42.00/kg | 15000.00 |
| | TOTAL | | | **1222124.00** |

**ಷರತ್ತುಗಳು**

1. ಸರಬರಾಜು ಆದೇಶ ತಲುಪಿದ ಒಂದು ವಾರದೊಳಗಾಗಿ ಕಾರ್ಮಿಕರ ಪರವಾನಗಿ ಮತ್ತು ಇ.ಎಸ್.ಐ., ಪಿ.ಎಫ್ ಮತ್ತು ವಾಹನಗಳ ನೊಂದಾಯಿತ ದಾಖಲಾತಿಗಳನ್ನು ಕಛೇರಿಗೆ ಸಲ್ಲಿಸುವುದು.
2. ಕಾರ್ಮಿಕರಿಗೆ ಕಡ್ಡಾಯವಾಗಿ ಕಾರ್ಮಿಕರ ಮತ್ತು ಗುತ್ತಿಗೆದಾರರ ವಂತಿಕೆ ಇ.ಎಸ್.ಐ., ಪಿ.ಎಫ್‌ಗಳನ್ನು ಪಾವತಿಸುವುದು ಹಾಗೂ ಅದರ ಪ್ರತಿಯನ್ನು ಮಾಸಿಕ ಬಿಲ್ಲಿನೊಂದಿಗೆ ಸಲ್ಲಿಸುವುದು.
3. ಗುತ್ತಿಗೆದಾರರನ್ನು ಕೆಲಸಕ್ಕಾಗಿ ನೇಮಕ ಮಾಡಿಕೊಳ್ಳಲು ವ್ಯಕ್ತಿಗಳಿಗೆ ಆಗಿರಬೇಕಾದ ಕನಿಷ್ಠ ವಯಸ್ಸು 18 ವರ್ಷ ತುಂಬಿರಬೇಕು ಹಾಗೂ 55 ವರ್ಷ ಮೀರಿರಬಾರದು ಹಾಗೂ ಆರೋಗ್ಯ ಮತ್ತು ಸದೃಢ ಕಾರ್ಮಿಕರನ್ನು ಮಾತ್ರ ನೇಮಿಸತಕ್ಕದ್ದು. 18 ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನ ಯಾವುದೇ ವ್ಯಕ್ತಿಯನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು.
4. ನೀವು ಸರಬರಾಜು ಮಾಡುವ ವಾಹನಗಳು ಉತ್ತಮ ಸ್ಥಿತಿಯಲ್ಲಿರಬೇಕು ಹಾಗೂ ವಾಹನಗಳ ರಿಪೇರಿ ನಿಮ್ಮದೇ ಜವಾಬ್ದಾರಿ.

5. ಕೆಲಸಗಾರರಿಗೆ ನೇರಳೆ ಬಣ್ಣದ ಮೇಲು ಹೊದಿಕೆ (ಏಪ್ರಾನ್)ಹಾಗೂ ಅಗತ್ಯ ಸಲಕರಣೆಗಳನ್ನು ಒದಗಿಸತಕ್ಕದ್ದು
6. ವಾಹನಗಳು ಹಾಘೂ ಪೌರಕಾರ್ಮಿಕರು ಕೆಲಸ ನಿರ್ವಹಿಸುವ ಸಮಯದಲ್ಲಿ ಹಾಗೂ ಇನ್ನಿತರೆ ಸಮಯದಲ್ಲಿ ಅಪಘಾತ/ಅವ ಸಂಭವಿಸಿದ್ದಲ್ಲಿ ಅದಕ್ಕೆ ನೀವೇ ನೇರ ಜವಾಬ್ದಾರರಾಗಿರುತ್ತೀರಿ.
7. ಕೆಲಸ ಸಮಯ ಬಗೆಗೆ ಪರಿಸರ ಅಧಿಕಾರಿ(ಚಾಮರಾಜಪೇಟೆ) ಉಪ ವಿಭಾಗ ರವರ ನಿರ್ದೇಶನದನ್ವಯ ಕಾರ್ಯನಿರ್ವಹಿಸುವುದು.
8. ಸ್ವಚತಾ ಕಲಸಕ್ಕೆ ಪೌರಕಾರ್ಮಿಕರು ಮತ್ತು ವಾಹನಗಳು ಗೈರುಹಾಜರಾದಲ್ಲಿ ಮಾಸಿಕ ಮೊತ್ತದ ಬಿಲ್ಲಿನಲ್ಲಿ ಕಟಾವು ಮಾಡಲಾಗುವುದು.
9. ಸಾರ್ವಜನಿಕರಲ್ಲಿ ಯಾವುದೇ ದೂರು ಬರದಂತೆ ನೋಡಿಕೊಳ್ಳುವುದು.
10. ವಾಹನದ ಮುಂದೆ ವಾಹನದ ಸಂಖ್ಯೆ. ವಾರ್ಡ್ ಸಂಖ್ಯೆ. ವಲಯದ ಹೆಸರು ಹಾಗೂ ಬಿಬಿಎಂಪಿ ತ್ಯಾಜ್ಯ ಸಾಗಣೆ ಆಟೋ/ಲಾರಿ/ಕಾಂಪ್ಯಾಕ್ಟರ್ ಎಂದು ಮುಂದುಗಡೆ ಕಡ್ಡಾಯವಾಗಿ ಬರೆಯಬೇಕು.
11. ಪ್ರತಿನಿತ್ಯ ಈ ವಾರ್ಡಿನಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯ ವಸ್ತುಗಳನ್ನು ಹಸಿ ಕಸ. ಒಣ ಕಸ ಮತ್ತು ನೈರ್ಮಲ್ಯ ಕಸ ಇತ್ಯಾದಿಯಾಗಿ ಪ್ರತ್ಯೇಕವಾಗಿ ಸಂಗ್ರಹಿಸಿ ಪ್ರತ್ಯೇಕವಾಗಿ ಪಾಲಿಕೆಯ ನಿರ್ದೇಶನದಂತೆ ವಿಲೇವಾಗಿ ಮಾಡುವುದು.
12. ಒಣತ್ಯಾಜ್ಯವನ್ನು ಒಣತ್ಯಾಜ್ಯ ಸಂಗ್ರಹಣಾ ಘಟಕಕ್ಕೆ ಖಡ್ಡಾಯವಾಗಿ ನೀಡುವುದು ಹಾಗೂ ಹಸಿ ಕಸವನ್ನು ಖಡ್ಡಾಯವಾಗಿ ಕೆ.ಸಿ.ಡಿ.ಸಿ ಗೆ ನೀಡುವುದು.
13. ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸದೇ ಇದ್ದಲ್ಲಿ ನಿಮಗೆ ನೀಡಿರುವ ಸರಬರಾಜು ಆದೇಶವನ್ನು ಯಾವುದೇ ಮುನ್ಸೂಚನೆ ಇಲ್ಲದೆ ರದ್ದುಗೊಳಿಸಲಾಗುವುದು.

ಕಾರ್ಯಪಾಲಕ ಅಭಿಯಂತರರು
ಚಾಮರಾಜಪೇಟೆ ವಿಭಾಗ 31/12/17
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ:

**ಶ್ರೀ.ಎನ್.ಗೌತಮ್ ರಾಜು**
**# 1988, 1ನೇ ಡಿ ಮುಖ್ಯ ರಸ್ತೆ,**
**ವಿಜಯನಗರ 2ನೇ ಹಂತ,**
**ಬೆಂಗಳೂರು-560040**

ಪ್ರತಿಯನ್ನು:

1. ಮಾನ್ಯ ಆಯುಕ್ತರ'ವರ ಆಪ್ತ ಕಾರ್ಯದರ್ಶಿಗಳಿಗೆ ಸದರಿ ವಿಷಯವನ್ನು ಮಾನ್ಯ ಆಯುಕ್ತರವರ ಗಮನಕ್ಕೆ ತರಲು ಕೋರಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು(ಪಶ್ಚಿಮ ವಲಯ), ರವರ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು(ಪಶ್ಚಿಮ) ವಲಯ ರವರ ಅವಗಾಹನಗೆ ಸಲ್ಲಿಸಿದೆ.
4. ಸಹಾಯಕ ನಿಯಂತ್ರಕರು(ಹಣಕಾಸು) ಪಶ್ಚಿಮ ವಲಯ ರವರ ಅವಗಾಹನಗೆ ಸಲ್ಲಿಸಿದೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ ಪರಿಸರ ಅಧಿಕಾರಿ( ಚಾಮರಾಜಪೇಟೆ) ಉಪವಿಭಾಗ ರವರಿಗೆ ಕಳುಹಿಸಿದೆ.
6. ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
7. ಕಛೇರಿ ಕಡತಕ್ಕೆ.